

ಕೊಕ್ಕಿನ ಗರಗಸದಂತೆ ಮೂತಿ ಇರುವ ಇವು ಬೇಟೆಯ ಜಪದಲ್ಲಿ ದಡದ ಮೇಲೆ ಮಲಗಿದ್ದವು. ಮಾಮೂಲಿ ಮೊಸಳೆಗಳಿಗೂ ಇವಕ್ಕೂ ಮುಖದಲ್ಲಿ, ಮೈ ಬಣ್ಣದಲ್ಲಿ ಮಾತ್ರ ವ್ಯತ್ಯಾಸವಿತ್ತು. ಊರಗಲ ಬಾಯಿ ಕಳೆದು ಮಲಗಿರುವ ಮೊಸಳೆಗಳ ಹಲ್ಲುಗಳಲ್ಲಿ ಸಿಲುಕಿರುವ ಮೀನಿನ ಚೂರುಗಳನ್ನು ಸಣ್ಣ ಹಕ್ಕಿಗಳು ಆಯ್ದು ತಿನ್ನುತ್ತಿದ್ದವು. ಹೀಗೆ ಬಂದು ಪುಕ್ಕಟ್ಟೆ ಹಲ್ಲುಜ್ಜಿ ಕ್ಲೀನ್ ಮಾಡುವ ಹಕ್ಕಿಗಳ ಕಂಡರೆ ಈ ಮೊಸಳೆಗಳಿಗೆ ಬಲು ಪ್ರೀತಿ.

ಈ ಮೊಸಳೆಗಳು ಇರುವ ಜಾಗದ ಆಚೆಗೆ ಹಳ್ಳಿಗಳಿದ್ದಾವೆ. ಅಲ್ಲಿಂದ ನೀರಿಗೆ ಬರುವ ಎಮ್ಮೆಗಳ ಹಿಂಡು ಒಮ್ಮೆಗೇ ಚಂಬಲ್ ನದಿಗೆ ರಭಸದಿಂದ ದೂಳೆಬ್ಬಿಸುತ್ತಾ ಇಳಿದವು. 'ಈ ಅರ್ಭಟದ ರಂಗಪ್ರವೇಶ ಏಕೆಂದು' ಬೋಟಿನ ಯಜಮಾನನ ಪ್ರಶ್ನಿಸಿದೆ. 'ನಮ್ಮಲ್ಲಿನ ಎಮ್ಮೆಗಳು ತುಂಬಾ ಬುದ್ಧಿಶಾಲಿಗಳು. ಮರಳಿನ ಮೇಲೆ ಮೊಸಳೆಗಳು ಮಲಗಿರುವುದು ಅವಕ್ಕೆ ಗೊತ್ತು. ಹೀಗೆ ಕುಣಿದಾಡಿಕೊಂಡು ಬಂದರೆ ಮೊಸಳೆಗಳು ಹೆದರಿ ಓಡುತ್ತವೆ. ಎಷ್ಟೋ ಸಲ ಎಮ್ಮೆ ಕಾಲ್ತುಳಿತಕ್ಕೆ ಸಣ್ಣ ಮೊಸಳೆಗಳು ಉಡೀಸ್ ಆಗಿವೆ. ದೊಡ್ಡ ಮೊಸಳೆಗಳು ಇದಕ್ಕೆಲ್ಲಾ ಕೇರ್ ಮಾಡೋದಿಲ್ಲ. ಎಷ್ಟೋ ಎಮ್ಮೆ ಮರಿಗಳನ್ನು ಹಿಡಿದು ಗುಳುಂ ಮಾಡಿವೆ. ರೈತರು ನಿಗಾ ವಹಿಸ್ತಾರೆ ಬಿಡಿ' ಎಂದ. ಎಮ್ಮೆಗಳಿಗೆ ಹೆದರಿ ಮೊಸಳೆಗಳು ಮೊಸಳೆಗಳಿಗೆ ಅಂಜಿ ಎಮ್ಮೆಗಳು ನಡೆಸುವ ಬಾಳುವೆ ಸೋಜಿಗವೆನಿಸಿತು. ಇಲ್ಲಿ ಕೊಲ್ಲುವ ಮತ್ತು ಜೀವ ಉಳಿಸಿಕೊಳ್ಳುವ ಎರಡೂ ಪ್ರಯತ್ನಗಳು ಮನುಷ್ಯರಾದ ನಮಗೆ ರೋಚಕ ಎನಿಸಬಹುದು. ಕಾಡಿನ ಭಾಷೆಯಲ್ಲಿ ಉಳಿವಿಗಾಗಿ ನಡೆಯುವ ಪಯತ್ನದಲ್ಲಿ ಶಕ್ತಿಶಾಲಿ ಮಾತ್ರ ವಿಜಯಿಯಾಗುತ್ತಾನೆ.

ದಡದ ಮತ್ತೊಂದು ಕಡೆ ನೀರು ಕಾಗೆಗಳ ನಡುವೆ ಬೇಟೆಯಾದ ಮೀನಿನ ಜಗಳ ನಡೆದಿತ್ತು. ತುಸು ದೊಡ್ಡ ಮೀನನ್ನೇ ಎಗರಿಸಿದ್ದ ನೀರು ಕಾಗೆಯ ಬಾಗಿದ ಕೊಕ್ಕಿನಲ್ಲಿ ಮೀನು ಸಿಕ್ಕಿಕೊಂಡಿತ್ತು.

ಕೊಕ್ಕಿನಿಂದ ಮೀನನ್ನು ಬಿಡಿಸಿಕೊಂಡು ತಿನ್ನಲು ನೀರು ಕಾಗೆ ಹರಸಾಹಸ ಪಡುತ್ತಿತ್ತು. ಆಗ ಇದ ಕಂಡು ದೂರದಿಂದ ಮತ್ತೊಂದು ನೀರು ಕಾಗೆ ಆಸೆಯಿಂದ ಹಾರಿ ಬಂದು ಮೀನು ಕಸಿಯಲು ಮುಂದಾಯಿತು. ಅಲ್ಲಿಂದ ಸತತ ಹತ್ತು ನಿಮಿಷ ಎರಡೂ ಕಾರ್ಮೊರೆಂಟ್‌ಗಳ ನಡುವೆ ಮಾರಾಮಾರಿ ಶುರುವಾಯಿತು. ಕೊಕ್ಕಿನಲ್ಲಿ ಗಡ್ಡದ್ದಾಗಿ ಸಿಕ್ಕಿ ಹೋಗಿದ್ದ ಮೀನು ಹೊರಗೆಳೆಯಲು ಸಾಧ್ಯವಾಗದೆ ಚಡಪಡಿಸುವ